**ಸಾಕ್ಷಿಯನ್ನು ದಿನಾಂಕ 26.9.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್ ವಕೀಲರಿಂದಃ</u>**

ನಾನು 10 ನೇ ತರಗತಿ ಓದುತ್ತಿದ್ದೇನೆ. ಪೋಲಿಸರು ನನ್ನ ತಾಯಿಯ ಮರಣದ ಬಳಿಕ ಹೇಳಿಕೆ ಮಾಡಿಕೊಂಡಿರುತ್ತಾರೆ. ನನ್ನ ತಾಯಿ ಮರಣ ಹೊಂದಿದ ದಿನವೇ ಹೇಳಿಕೆ ಮಾಡಿಕೊಂಡಿರುತ್ತಾರೆ. ನಂತರ ಹೊಸ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು 4 ನೇ ತರಗತಿವರೆಗೆ ಮಾನಸ ಕಾನ್ವೆಂಟಿನಲ್ಲಿ ಓದಿರುತ್ತೇನೆ. ಮಾನಸ ಕಾನ್ವೆಂಟಿನಲ್ಲಿ ಬೆಳಿಗ್ಗೆ 9.10 ರಿಂದ ಸಂಜೆ 4 ಗಂಟೆವರೆಗೆ ಶಾಲೆ ಇರುತ್ತಿತ್ತು. ನನ್ನ ತಂದೆ ಹಾರ್ಡವೇರ್ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ನಿಜ. ನನ್ನ ತಂದೆ ಯಾವ ಸಮಯಕ್ಕೆ ಕೆಲಸಕ್ಕೆ ಹೋಗುತ್ತಿದ್ದರು ಎಂದು ಆ ಕಾಲಕ್ಕೆ ನಾನು ಚಿಕ್ಕವಯಸ್ಸಿನವಳಾದ್ದರಿಂದ ನನಗೆ ಗೊತ್ತಿಲ್ಲ. ನಮ್ಮನ್ನು ನನ್ನ ತಾಯಿಯೇ ರೆಡಿ ಮಾಡಿ ಶಾಲೆಗೆ ಬಿಟ್ಟು ಪುನಃ ಮನೆಗೆ ಹೋಗುತ್ತಿದ್ದರು. ಮೊದಲಿಗೆ ನನ್ನ ತಂದೆ ತಾಯಿ ನಮ್ಮೊಂದಿಗೆ ನನ್ನ ತಾತನ ಮನೆಯ ಹಿಂಭಾಗದಲ್ಲಿರುವ ಮನೆಯಲ್ಲಿ ವಾಸವಿದ್ದರು. ನಾನು, ನನ್ನ ಸಹೋದರ, ಸಹೋದರಿ ಆ ಮನೆಯಲ್ಲಿದ್ದಾಗಲೇ ಜನಿಸಿದ್ದೇವೆ ಎಂದರೆ ನಿಜ. ಅಲ್ಲಿ ನನ್ನ ತಾತನ ಮನೆ ಮುಂಭಾಗ ಮತ್ತು ನಾವು ವಾಸವಿದ್ದ ಮನೆ ಹಿಂಭಾಗದಲ್ಲಿತ್ತು ಎಂದರೆ ನಿಜ. ನನ್ನ ತಂದೆ

ಸಂಜೆ 6-6.30 ಗಂಟೆಗೆ ಕೆಲಸದಿಂದ ಮನೆಗೆ ಬರುತ್ತಿದ್ದರು. ಮಾನಸ ಕಾನ್ವೆಂಟ್ ತುಂಬಾ ದೊಡ್ಡ ಕಾನ್ವೆಂಟ್ ಎಂದರೆ ನಿಜ. ನಮ್ಮನ್ನು ಚನ್ನಾಗಿ ಓದಿಸಬೇಕೆಂದು ಆ ಶಾಲೆಗೆ ಸೇರಿಸಿದ್ದರು ಎಂದರೆ ನನ್ನ ತಾಯಿಯೇ ಆ ಶಾಲೆಗೆ ಸೇರಿಸಿದ್ದರು. ನನ್ನ ತಂದೆಯ ಆದಾಯದಿಂದಲೇ ನಮ್ಮ ಶಾಲೆಯ ಖರ್ಚು ವೆಚ್ಚ ನಡೆಯುತ್ತಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಸಹೋದರರಿನಿಂದ ಹಣ ಪಡೆದು ಖರ್ಚು ಮಾಡುತ್ತಿದ್ದರು. ನನ್ನ ತಾಯಿಗೆ 3 ಜನ ಅಣ್ಣಂದಿರು, 3 ಜನ ತಂಗಿಯರು. ನನ್ನ ಅಜ್ಜಿಯ ಮನೆಯಲ್ಲಿ ನನ್ನ ತಾತ, ಅಜ್ಜಿ, ಮಾವನಾದ ರಿಜ್ವಾನ್ ಮತ್ತು ಅವರ ಹೆಂಡತಿ ವಾಸವಿದ್ದರು. ಚಾಸ 6 ಮಹಮ್ಮದ್ ಸದ್ದಾಂ ಗೌಸಿಯಾನಗರದಲ್ಲಿ ವಾಸವಿದ್ದಾನೆ ಎಂದರೆ ನಿಜ. ಅವನು ಮದುವೆಯಾದಗಿನಿಂದ ಗೌಸಿಯಾನಗರದಲ್ಲಿ ವಾಸವಿದ್ದಾನೆ ಎಂದರೆ ನಿಜ. ಚಾಸ 6 ಪ್ರೀತಿಸಿ ಮದುವೆಯಾದ್ದರಿಂದ ನನ್ನ ಅಜ್ಜ ಅಜ್ಜಿಗೆ ಅವನನ್ನು ಕಂಡರೆ ಆಗುತ್ತಿರಲಿಲ್ಲ ಎಂದರೆ ಗೊತ್ತಿಲ್ಲ. ಚಾಸ 6 ಮತ್ತು ಆತನ ಹೆಂಡತಿ ನನ್ನ ಅಜ್ಜ ಅಜ್ಜಿಯ ಮನೆಗೆ ಬರುತ್ತಿರಲಿಲ್ಲ ಎಂದರೆ ನಿಜ. ನೌಸಾದ್ ನನ್ನ ತಂದೆಯ ತಮ್ಮನಿರುತ್ತಾನೆ. ಆತನನ್ನು ನನ್ನ ತಂದೆಯೇ ಕರೆದುಕೊಂಡು ಬಂದಿದ್ದರು. ನೌಶಾದ್ ನಮ್ಮ ಮನೆಯಲ್ಲಿ ಎಷ್ಟು ದಿನ ಇದ್ದ ಎಂದು ಗೊತ್ತಿಲ್ಲ. ನನ್ನ ತಂದೆ ಇಲ್ಲದಿದ್ದಾಗ ನೌಶಾದ್ ನಮ್ಮ ಮನೆಗೆ ಬರುತ್ತಿದ್ದನೋ ಎಂದು ನಾನು ಶಾಲೆಗೆ ಹೋಗುತ್ತಿದ್ದರಿಂದ ಗೊತ್ತಿಲ್ಲ. ನನಗೆ ರಜೆ ಇದ್ದಾಗಲೆಲ್ಲ ನನ್ನ ತಂದೆ ಇಲ್ಲದಿದ್ದಾಗ ನೌಶಾದ್ ನಮ್ಮ ಮನೆಗೆ ಬರುತ್ತಿರಲಿಲ್ಲ. ನನ್ನ ತಾಯಿಗೂ ನೌಶಾದ್ ನಿಗೂ ಯಾವುದೇ ಸಂಬಂಧ ಇರಲಿಲ್ಲ,

ಆರೋಪಿತನೇ ಸಂಬಂಧ ಕಟ್ಟಿದ್ದ. ನನ್ನ ತಾಯಿ ಮರಣ ಹೊಂದುವ ಹಿಂದಿನ ದಿನ ರಾತ್ರಿ 10.30 ರಲ್ಲಿ ಆರೋಪಿ ಮನೆಗೆ ಬಂದು ಬಾಗಿಲು ಬಡಿದು ಗಲಾಟೆ ಮಾಡಿದ್ದ. ನಾನು ದಿನಾಲೂ ರಾತ್ರಿ 10 ಗಂಟೆಗೆ ಮಲಗುತ್ತೇನೆ. ದಿನಾಂಕ 24.7.2019 ರಂದು ರಾತ್ರಿ ಆರೋಪಿ ಮತ್ತು ನೌಶಾದ್ ನಮ್ಮ ಮನೆಗೆ ಬಂದಿದ್ದರು. ಆ ಕಾಲಕ್ಕೆ ಆರೋಪಿ ಮತ್ತು ನೌಶಾದ್ ನಮ್ಮ ತಾಯಿಗೆ ತೊಂದರೆ ಕೊಟ್ಟರು. ಆ ಕಾಲಕ್ಕೆ ಇಬ್ಬರೂ ಸೇರಿ ನಿನ್ನನ್ನು ಕೊಂದು ಹಾಕುತ್ತೇನೆ ಎಂದು ಹೇಳಿದರು. ಪೋಲಿಸರ ಮುಂದೆ ನನ್ನ ತಂದೆ ಮತ್ತು ನೌಶಾದ್ ಮನೆಗೆ ಬಂದು ನನ್ನ ತಾಯಿಗೆ ಕೊಂದು ಹಾಕುತ್ತೇವೆ ಎಂದು ಹೇಳಿದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಆದರೆ ಮಧ್ಯರಾತ್ರಿ ಬಂದಿದ್ದರು ಎಂದು ಹೇಳಿಕೆ ನೀಡಿಲ್ಲ. ಆ ಕಾಲಕ್ಕೆ ರಾತ್ರಿ ನನ್ನ ತಾಯಿಗೆ ಹೊಡೆದು ಬೈದು ನಂತರ ಆರೋಪಿ ಹೊರಟು ಹೋಗಿದ್ದ. ನಂತರ ಪುನಃ ಮನೆಗೆ ಬಂದಿರಲಿಲ್ಲ. ನನ್ನ ತಾಯಿ ಮರಣ ಹೊಂದಿದ ದಿನ ನನ್ನನ್ನು ನನ್ನ ಮಾವ ಶಾಲೆಯಿಂದ ಮನೆಗೆ ಕರೆದುಕೊಂಡು ಬಂದನು. ನನ್ನ ತಾಯಿಯು ಮಹಮ್ಮದ್ ಅರಾನ್ ನಿಗೆ ಗರ್ಭಿಣಿಯಾಗಿದ್ದಾಗ ನನ್ನ ತಾಯಿಯ ಹೊಟ್ಟೆಗೆ ಆರೋಪಿ ಒದ್ದಿದ್ದ. ಗಾಯತ್ರಿಪುರಂ ಮನೆಯಲ್ಲಿ ಒಂದು ರೂಂ, ಒಂದು ಹಾಲ್ ಮತ್ತು ಒಂದು ಕಿಚನ್ ಇತ್ತು. ಗಾಯತ್ರಿಪುರಂ ಮನೆಯ ಅಕ್ಕಪಕ್ಕ ಸಾಲು ಮನೆಗಳಿವೆ ಎಂದರೆ ನಿಜ. ನೌಶಾದ್‌ನಿಗೆ ಮದುವೆಯಾಗಿತ್ತು ಎಂದರೆ ಗೊತ್ತಿಲ್ಲ. ನಾಶಾದ್ ತನ್ನ ಹೆಂಡತಿ ಮಕ್ಕಳ ಜೊತೆ ಮಹಮ್ಮದ್ ಶೇಟ್ ಬ್ಲಾಕಿನಲ್ಲಿ ವಾಸವಿದ್ದ ಎಂದರೆ ಗೊತ್ತಿಲ್ಲ. ನನ್ನ ಅಜ್ಜಿಯ ಮನೆಯಲ್ಲಿದ್ದಾಗ ಮತ್ತು ಗಾಯತ್ರಿಪುರಂ

ಮನೆಯಲ್ಲಿದ್ದಾಗ ನನ್ನ ತಂದೆಯು ನನ್ನ ತಾಯಿಯ ಜೊತೆ ಚನ್ನಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ನನ್ನ ಅಜ್ಜಿಯ ಮನೆಯಲ್ಲಿ ವಾಸವಿರಲು ಇಷ್ಟವಿಲ್ಲದ್ದರಿಂದ ಅವರೇ ಗಾಯತ್ರಿಪುರಂ ಮನೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ದಿನಾಂಕ 24.7.2019 ರಂದು ನನ್ನ ತಂದೆಯು ನನ್ನ ತಾಯಿಗೆ ಹೊಡೆದಿಲ್ಲ ಮತ್ತು ಬೈದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆ ರೀತಿ ಹೊಡೆದಾಗ ಮತ್ತು ಬೈದಾಗ ಅಕ್ಕಪಕ್ಕದವರಿಗೆ ಕೇಳಿರಲಿಲ್ಲ. ಆ ರೀತಿ ಹೊಡೆದಾಗ ನನ್ನ ತಾಯಿ ಅಳುತ್ತಿದ್ದರು, ಆದರೆ ಜೋರಾಗಿ ಕಿರುಚುತ್ತಿರಲಿಲ್ಲ. ಆ ಕಾಲಕ್ಕೆ ನನ್ನ ತಾಯಿ ಬಳಿ ಮೊಬೈಲ್ ಫೋನ್ ಇತ್ತು. ನನ್ನ ಅಜ್ಜನ ಬಳಿ ಸಹ ಫೋನ್ ಇತ್ತು. ದಿನಾಂಕ 24.7.2019 ರಂದು ಆರೋಪಿ ಹೊಡೆದಾಗ ಅದನ್ನು ನನ್ನ ತಾತನಿಗೆ ಫೋನ್ ಮಾಡಿ ಹೇಳಿರುವುದಿಲ್ಲ. ಗಾಯತ್ರಿಪುರಂ ಮನೆಗೆ ಯಾರಾದರೂ ಬಂದರೆ ಹೋದರೆ ಎದುರುಗಡೆ ಮನೆಯವರಿಗೆ ಕಾಣುತ್ತಿತು ಎಂದರೆ ನಿಜ. ನನ್ನ ತಾಯಿ ಮರಣ ಹೊಂದಿದಾಗ ನಾನು ಶಾಲೆಯಿಂದ ಬಂದಾಗ ಅಲ್ಲಿ ತುಂಬಾ ಜನ ಸೇರಿದ್ದರು ಎಂದರೆ ನಿಜ. ಆ ಕಾಲಕ್ಕೆ ನನ್ನ ತಾತನ ಸಂಬಂಧಿಗಳು ಬಹಳ ಜನ ಸೇರಿದ್ದರು ಎಂದರೆ ನಿಜ. ನನ್ನ ತಾಯಿ ಮರಣ ಹೊಂದಿರುವುದು ಗೊತ್ತಾದ ಬಳಿಕ ಮದ್ಯಾಹ್ನ ನನ್ನ ತಂದೆ ಅಲ್ಲಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ತಾತ ಮತ್ತು ಆತನ ಸಂಬಂಧಿಕರು ನನ್ನ ತಂದೆಗೆ ಹೊಡೆದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿನ್ನನ್ನು ಕೊಲೆ ಮಾಡುತ್ತೇವೆ ಮತ್ತು ಕೇಸ್ ಹಾಕುತ್ತೇವೆ ಎಂದು ಹೆದರಿಸಿದ್ದರಿಂದ ನನ್ನ ತಂದೆ ಅಲ್ಲಿಂದ ಓಡಿಹೋದರು

ಎಂದರೆ ಸರಿಯಲ್ಲ. ನನ್ನ ತಂದೆ ಯಾವತ್ತೂ ನನ್ನ ತಾಯಿಗೆ ಹೊಡೆದಿಲ್ಲ ಮತ್ತು ಬೈದಿಲ್ಲ ಎಂದರೆ ಸರಿಯಲ್ಲ. ಈ ದಿನ ನಾನು ಪ್ರಾಸಿಕ್ಯೂಟರ್ ಕಛೇರಿಗೆ ಹೋಗಿದ್ದೆ ಎಂದರೆ ನಿಜ. ಈ ಪ್ರಶ್ನೆಗೆ ಪ್ರಾಸಿಕ್ಯೂಟರ್ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಈ ದಿನ ಏನು ಹೇಳಬೇಕೆಂದು ಪೋಲಿಸರು ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಹೇಳಿದಂತೆ ಈ ದಿನ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನಿಗೂ ನನ್ನ ತಂದೆಗೂ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತನೇ ನನ್ನ ತಂದೆಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು